ಸಭೆಯಲ್ಲಿ ನಮ್ಮ ಎಲ್ಲಾ ಅಧಿಕಾರಿಗಳು, ಮುಖ್ಯ ಕಾರ್ಯದರ್ಶಿಗಳಾದಿಯಾಗಿ, ನಾವೆಲ್ಲರೂ ಅಲ್ಲಿ ಭಾಗವಹಿಸಿದ್ದೆವು. ಅಲ್ಲಿ ಚರ್ಚೆ 1.00–1.30 ಗಂಟೆಗೆ ಮುಗಿಯಬಹುದು. ಆ ವರದಿ ಬಂದ ತಕ್ಷಣ ಸಂಪೂರ್ಣವಾಗಿ ನೋಡಿ, ಸಾಧ್ಯವಾದರೆ ಈ ದಿವಸ ಸಾಯಂಕಾಲ ಅಥವಾ ನಾಳೆ ದಿವಸ ಖಂಡಿತವಾಗಿ ಈ ಸದನಕ್ಕೆ ಏನು ಕ್ರಮವನ್ನು ಕೈಗೊಳ್ಳುತ್ತೇವೆನ್ನುವುದನ್ನು ತಿಳಿಸುತ್ತೇನೆ.

ಆ) ವಿಷಯ :– ಕಬ್ಬು ಬೆಳೆಗಾರರು ವಿಷ ಸೇವಿಸಿರುವುದರ ಮತ್ತು ಕಬ್ಬು ಸಮಸ್ಯೆಯ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ್) :– ಮಾನ್ಯ ಅಧ್ಯಕ್ಷರೆ, ಜೇವರ್ಗಿಯಲ್ಲಿ 8 ಜನ ಕಬ್ಬು ಬೆಳೆಗಾರರು ವಿಷವನ್ನು ತೆಗೆದುಕೊಂಡು, ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಅಧ್ಯಕ್ಷರು :– ನಿಮಗೆ ಯಾರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದು, ಕುಳಿತುಕೊಳ್ಳಿ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ಏನೆಂದರೆ, ನೀವು ನೀವೇ ನಿಂತುಕೊಂಡು ಏನು ವಿಚಾರವನ್ನಾದರೂ ಪ್ರಸ್ತಾಪ ಮಾಡಬಹುದಾ? ನೀವು ವಿಷಯವನ್ನು ನಮ್ಮ ಗಮನಕ್ಕೆ ತರಬಾರದ? ನಿಮಗೆ ಅರ್ಥವಾಗುವುದಿಲ್ಲ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ :– ಮಾನ್ಯ ಅಧ್ಯಕ್ಷರೆ, 8 ಜನ ರೈತರು ವಿಷ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು :– ನೀವು ವಿಷಯ ಏನೆಂಬುದನ್ನು ನಮ್ಮ ಗಮನಕ್ಕೆ ತರಬೇಕು. ಅದಕ್ಕೆ ಯಾವ ಸಮಯದಲ್ಲಿ ಅವಕಾಶವನ್ನು ಕೊಡಬೇಕೋ ಕೊಡುತ್ತೇನೆ. ಈ ರೀತಿ ಸುಮ್ಮನೆ ನಿಂತುಕೊಂಡು ಎಲ್ಲೋ ಏನೇನೋ ವಿಷಯವನ್ನು ಪ್ರಸ್ತಾಪ ಮಾಡಿದರೆ, ನಾನು ಏನು ಮಾಡುವುದು? ಆಯಿತು, ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಾನು ತಮಗೆ ಅಭಿನಂದಿಸುತ್ತೇನೆ. ರಾಜ್ಯದಲ್ಲಿ ಮೊದಲನೆಯ ಸಲ ಕಬ್ಬು ಬೆಳೆಗಾರರು, ವಿಷವನ್ನು ತೆಗೆದುಕೊಂಡು ಈಗಾಗಲೇ ಮೂರು ಜನರು ಸತ್ತಿದ್ದಾರೆ. ಈ ಕಡೆ ಮೈಸೂರು ಭಾಗದಲ್ಲಿ, ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ....

ಅಧ್ಯಕ್ಷರು :- ಮಾನ್ಯ ಪಾಟೀಲ್‌ರವರೆ, ನೀವು ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದೀರಾ?

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು :- ನೀವು ನಮ್ಮ ಗಮನಕ್ಕೆ ತಂದಿದ್ದೀರಾ, ನನ್ನ permission ತೆಗೆದುಕೊಂಡಿದ್ದೀರಾ?

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಾನು ಎರಡು ನಿಮಿಷಗಳಲ್ಲಿ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು :- ಆಗಲ್ಲ, ಇಲ್ಲಿ ಕೆಲವರು practice ಮಾಡಿಕೊಂಡಿದ್ದೀರಿ. ವಿಷಯವನ್ನು ನಮ್ಮ ಗಮನಕ್ಕೆ ತರುವುದಿಲ್ಲ. ಸುಮ್ಮನೆ ಎದ್ದು ನಿಂತುಕೊಂಡು ಪ್ರಸ್ತಾಪ ಮಾಡುವುದು.

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು ಯಾವತ್ತು ಕೂಡ ಆ ರೀತಿ ಮಾಡಿಲ್ಲ. ಇದು ಬಹಳ ಗಂಭೀರವಾದ ವಿಷಯ.

ಅಧ್ಯಕ್ಷರು :- ತಾವು ವಿಷಯವನ್ನು ನನ್ನ ಗಮನಕ್ಕೆ ತರಬೇಕಾಗಿತ್ತು. ನೀವು ಏನು ವಿಷಯವನ್ನು ಪ್ರಸ್ತಾಪ ಮಾಡುತ್ತೀದ್ದಿರೆಂಬುದು ನನಗೆ ಗೊತ್ತಾಗಬೇಕಲ್ಲಾ, ಆಮೇಲೆ ನಾನು ಯೋಚನೆ ಮಾಡಿ ಅವಕಾಶವನ್ನು ಕೊಡಬೇಕಲ್ಲಾ, ಏನೆಂದು ಅರ್ಥವಾಗುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಕಬ್ಬು ಬೆಳೆಗಾರರು ಜೇವರ್ಗಿ ತಹಶೀಲ್ದಾರರ ಕಚೇರಿಯ ಎದುರಿಗೆ ನಿರಂತರವಾಗಿ 15 ದಿವಸಗಳ ಕಾಲ ಧರಣಿ, ಸತ್ಯಾಗ್ರಹವನ್ನು ಮಾಡುತ್ತಾ, ಕೊನೆಗೆ ಜಿಲ್ಲಾಧಿಕಾರಿಯವರು ಸಭೆಯನ್ನು ಕರೆದರು. ಮೀಟಿಂಗ್ ಮಾಡಿದರು, ಏನೂ ಪರಿಹಾರ ಸಿಗಲಿಲ್ಲ. ಕೊನೆಗೆ ಮೊನ್ನೆ ದಿವಸ ಅವರು ನಿರ್ಣಯವನ್ನು ಮಾಡಿದರು. ನಾವೆಲ್ಲರೂ ವಿಷವನ್ನು ತೆಗೆದುಕೊಂಡು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತೇವೆಂದು ನಿರ್ಣಯವನ್ನು ಅವರು ಮಾಡಿದೆ ಮೇಲೆ, ಇವತ್ತು ಬೆಳಿಗ್ಗೆ Assistant Commissioner ಮತ್ತು ತಹಶೀಲ್ದಾರರು ಅವರ ಹತ್ತಿರ ಮಾತನಾಡುತ್ತಿರಬೇಕಾದರೆ, ಅವರ ಎದುರಿಗೆ ಹತ್ತು

ಜನರು ವಿಷವನ್ನು ತೆಗೆದುಕೊಂಡರು. ಎಂಟು ಜನರು ಬಹಳ ಅಪಾಯ ಪರಿಸ್ಥಿತಿಯಲ್ಲಿ ಇದ್ದಾರೆ. ಅವರು ಗುಲ್ಬರ್ಗಾ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಇಂಥ ಒಂದು ಗಂಭೀರ ವಿಷಯದ ಬಗ್ಗೆ ಸದನದಲ್ಲಿ ನಾವೆಲ್ಲರೂ ಕೂಡ ಪಕ್ಷಾತೀತವಾಗಿ, ಕಬ್ಬು ಬೆಳೆಗಾರರ ಸಮಸ್ಯೆಯನ್ನು ಪರಿಹಾರ ಮಾಡಲು ಚರ್ಚೆ ಮಾಡಿದ್ದೇವೆ. ಆದರೆ ಯಾವುದೇ ಪರಿಹಾರ ಸಿಗದೇ ಇದ್ದ ಕಾರಣದಿಂದ ರಾಜ್ಯ ಸರ್ಕಾರ ಯಾವುದೇ ಭರವಸೆಯನ್ನು ಮೂಡಿಸದೇ ಇದ್ದ ಕಾರಣಕ್ಕಾಗಿ, ರೈತರು ಇಂಥ ಗಂಭೀರ ಪರಿಸ್ಥಿತಿಗೆ ಮುಟ್ಟಿದ್ದಾರೆ. ಈಗ ಮಾನ್ಯ ಗೃಹ ಸಚಿವರು ಇದ್ದಾರೆ, ಮಾನ್ಯ ಸಕ್ಕರೆ ಸಚಿವರು ಇದ್ದಾರೆ. ಈಗ ಅಲ್ಲದಿದ್ದರೂ ಒಂದು ಗಂಟೆ ಬಿಟ್ಟು ಅಥವಾ ನಾಳೆಯಾದರೂ ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು :– ಈ ರೀತಿ ಮಾಡುತ್ತೀರೆಂಬುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಜಿ.ಟಿ. ದೇವೇಗೌಡ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳುತ್ತಿದ್ದಾರಲ್ಲಾ ಆ ಪ್ರಶ್ನೆಗೆ ಉತ್ತರ ಸನ್ಮಾನ್ಯ ಮುಖ್ಯಮಂತ್ರಿಯವರು ಕಾರ್ಖಾನೆ ಮಾಲೀಕರನ್ನು, ರೈತರನ್ನು ಕರೆದು ಕ್ರಮ ಕೈಗೊಳ್ಳುವುದಕ್ಕೆ ಕ್ರಮ ಕೈಗೊಂಡಿದ್ದಾರೆ. ನಾಳೆ ಸಭೆ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಜೇವರ್ಗಿಯಲ್ಲಿ ರೈತರು ವಿಷ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಲಿ, ಆಮೇಲೆ ಮಾತುಕತೆ ಮಾಡಲಿ. ಮೊದಲು ಸರ್ಕಾರ ಒಂದು ಹೇಳಿಕೆಯನ್ನು ಕೊಡಲಿ.

ಅಧ್ಯಕ್ಷರು :– ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ ಎಂದು ಹೇಳುತ್ತಿದ್ದೀರಿ. ಆ ಸಭೆ ಆದಮೇಲೆ, ಇಲ್ಲಿ ನೀವು ಪರಿಸ್ಥಿತಿಯ ಬಗ್ಗೆ ಒಂದು ವರದಿಯನ್ನು ಕೊಡಬೇಕಾಗುತ್ತದೆ.

ಶ್ರೀ ಜಿ.ಟಿ. ದೇವೇಗೌಡ :– ಆಗಬಹುದು ಅಧ್ಯಕ್ಷರೆ, ಸಭೆಗೆ ಎಲ್ಲ ಶಾಸಕರನ್ನೂ ಕರೆದಿದ್ದೇವೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಾವು ಆಗಲೇ ಸಭಾತ್ಯಾಗ ಮಾಡಿ ಹೊರಗೆ ಹೋಗಿದ್ದೆವು. ಮಾನ್ಯ ಬಿ.ಆರ್.ಪಾಟೀಲರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ನನ್ನ ತಾಲ್ಲೂಕಿನಲ್ಲಿ ಆಗಿದೆ. ಕಳೆದ 6ನೇ ತಾರೀಖು ನಾನು ಜೇವರ್ಗಿ ತಾಲ್ಲೂಕಿಗೆ ಹೋಗಿದ್ದೆ. ಅಲ್ಲಿ ಜನತಾದಳ (ಎಸ್) ಕಾರ್ಯಕರ್ತರು, ಬೇರೆ ಕಾರ್ಯಕರ್ತರು, ರೈತರು ಎಲ್ಲರೂ ಉಪವಾಸ ಕುಳಿತಿದ್ದರು. ನಾವು 15 ದಿವಸಗಳಿಂದ ಹೀಗೆ ಕುಳಿತಿದ್ದೇವೆ, ಇದುವರೆಗೂ ಸರ್ಕಾರದಿಂದ ಯಾರೂ ಬಂದು ಸಮಾಲೋಚನೆ ಮಾಡಿಲ್ಲ ಎಂದು ಅವರು ಹೇಳಿದರು. ನಾನು ಅವರಿಗೆ ಹೇಳಿದೆ. ಕಬ್ಬಿನ ಬಗ್ಗೆ ಹೆಚ್ಚಿನ ಚರ್ಚೆಯಾಗಿದೆ, ಶಿವಾನಂದ ಪಾಟೀಲರು, ಹುಕ್ಕೇರಿಯವರು ಮತ್ತು ಬಿ.ಆರ್.ಪಾಟೀಲರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಇವತ್ತಿನ ದಿವಸ ಉತ್ತರ ಕರ್ನಾಟಕದ ಭಾಗದಲ್ಲಿ ಅಂದರೆ ಬೀದರ್‌ನಲ್ಲಿ, ಗುಲ್ಬರ್ಗದಲ್ಲಿ, ಬೆಳಗಾಂನಲ್ಲಿ ಕಬ್ಬು ಬೆಳೆಗಾರರಿಗೆ ಬೆಲೆ ಸಿಗುತ್ತಿಲ್ಲ. ಅವರು ಬೆಳೆದಂಥ ಕಬ್ಬನ್ನು ಯಾರೂ ತೆಗೆದುಕೊಂಡು ಹೋಗುತ್ತಿಲ್ಲ. ಒಂದೊಂದು ಕಡೆ ಏನಾಗಿದೆ ಎಂದರೆ, ಬೆಳೆದಂಥ ಕಬ್ಬನ್ನೇ ಸುಟ್ಟುಹಾಕಿಬಿಟ್ಟಿದ್ದಾರೆ. ಮತ್ತು ಆತ್ಮಹತ್ಯೆ ಮಾಡಿಕೊಳ್ಳುವಂಥ ದೊಡ್ಡ ಘಟನೆ ಕೂಡ ನಿನ್ನೆ ನಡೆದಿದೆ. ಬಿ.ಆರ್.ಪಾಟೀಲರು ಅದನ್ನು ಪ್ರಸ್ತಾಪ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ಜನ ಕಬ್ಬು ಬೆಳೆಗಾರರು ನಿರಶನ ಕುಳಿತಿದ್ದಾರೆ, ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದು ಗಂಭೀರವಾದಂಥ ವಿಷಯ. ರಾಜಕೀಯವಾಗಿ ನಾವು ಇದನ್ನು ಪ್ರಸ್ತಾಪ ಮಾಡುತ್ತಿಲ್ಲ. ಈಗ ಮುಖ್ಯಮಂತ್ರಿಗಳು ಕೂಡ ಇಲ್ಲಿ ಇದ್ದಾರೆ. ಕಬ್ಬು ಬೆಳೆದಂಥ ರೈತರಿಗೆ ನೆರವಾಗತಕ್ಕಂಥ ರೀತಿಯಲ್ಲಿ ಅವರು ಸ್ಪಷ್ಟವಾದಂಥ ಉತ್ತರ ಕೊಡಬೇಕು. ಆ ಜನರಿಗೆ ಒಂದು ಸಂದೇಶ ಹೋಗಬೇಕು, ತಾವು ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಿ ನಮ್ಮ ಜೊತೆಯಲ್ಲಿ ಚರ್ಚೆ ಮಾಡಲು ಬರಬೇಕು ಎನ್ನುವಂಥ ಮಾತನ್ನು ನೇರವಾಗಿ ಹೇಳಬೇಕೆಂದು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಅವರ ಉತ್ತರಕ್ಕೆ ಮೊದಲು ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ. ನಾವೂ ಕಬ್ಬಿನ ಬಗ್ಗೆಯೇ ಕೇಳುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಇವರು ಇವತ್ತು ಸಾಯಂಕಾಲದೊಳಗೆ Bill ಗಳನ್ನೆಲ್ಲ ಚರ್ಚೆ ಮಾಡದೇ pass ಮಾಡಿಕೊಡುವುದಾದರೆ

ನಾವು ಇದರ ಬಗ್ಗೆ ಎಷ್ಟು ಹೊತ್ತು ಬೇಕಾದರೂ ಚರ್ಚೆ ಮಾಡಲು ಒಪ್ಪಿಕೊಳ್ಳುತ್ತೇವೆ. ಸಮಯವನ್ನೆಲ್ಲ ವ್ಯರ್ಥ ಮಾಡಿ ನಮಗೆ ಫಜೀತಿ ಮಾಡುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :-- ಸರ್ಕಾರ ಮಧ್ಯ ಪ್ರವೇಶ ಮಾಡಲಿಕ್ಕೆ ನಿರಾಕರಣೆ ಮಾಡಿದರು. ನಾವು ಏನೂ ಮಾಡಲಿಕ್ಕಾಗುವುದಿಲ್ಲ ಎಂದು ಹೇಳಿದರು. ಹೋದ ವಾರ ಇಲ್ಲಿ ಇದರ ಬಗ್ಗೆ ವಿವರವಾದ ಚರ್ಚೆ ನಡೆಯಿತು. ಕಬ್ಬು ಬೆಳೆಯುವಂಥ ರೈತರಿಗೆ ಈ ಗಂಡಾಂತರ ಬರುತ್ತದೆ, ಅವರಿಗೆ ಬೇರೆ ದಾರಿಯಿಲ್ಲ, ಅವರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಹೇಳಿದೆವು. ಇವತ್ತು ಅದೇ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ, ಇವರನ್ನು ಉಳಿಸಲು ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಸರ್ಕಾರದವರು ತಕ್ಷಣ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಹೋದ ಸಾರಿ ಇಡೀ ರೈತರ ಸಭೆಯನ್ನು ಕರೆದಿದ್ದಿರಿ. ರೈತ ಸಂಘದ ಮುಖಂಡರಾದ ಮಾನ್ಯ ಪುಟ್ಟಣ್ಣಯ್ಯನವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದರು. ಇವತ್ತು ಗುಲ್ಬರ್ಗದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಏನು ಮುಂದಾಗಿದ್ದಾರೆ. ಇಡೀ ರಾಜ್ಯದಲ್ಲಿ ಆ ಪರಿಸ್ಥಿತಿ ನಿರ್ಮಾಣವಾಗಿದೆ. ಮುಖ್ಯಮಂತ್ರಿಗಳು ಇಷ್ಟು ಹೊತ್ತಿಗಾಗಲೇ ಒಂದು ಸಭೆ ಕರೆದು ತೀರ್ಮಾನ ಮಾಡಬೇಕಾಗಿತ್ತು. ಆದರೆ ಇದುವರೆಗೂ ಏನೂ ತೀರ್ಮಾನ ಮಾಡಿಲ್ಲ. ಸುದೈವದಿಂದ ಶಾಸನಸಭೆ ನಡೆಯುತ್ತಿರುವುದರಿಂದ ನಾವು ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ. ಏನಾದರೂ ಮಾಡಿ ಈ ಬಗ್ಗೆ ನೀವು ದಿಟ್ಟ ನಿಲುವ ತೆಗೆದುಕೊಂಡು ಆ ಕಬ್ಬು ಬೆಳೆಗಾರರನ್ನು ಉಳಿಸತಕ್ಕಂಥ ಸ್ಪಷ್ಟವಾದ ನಿರ್ಧಾರವನ್ನು ತಾವು ತೆಗೆದುಕೊಳ್ಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :- ಮಾನ್ಯ ಅಧ್ಯಕ್ಷರೆ, ಈರುಳ್ಳಿಗೆ, ಕೊಬ್ಬರಿಗೆ ಆವರ್ತ ನಿಧಿಯಿಂದ ಹಣ ಕೊಡುತ್ತಿದ್ದೀರಿ. ಅದೇ ರೀತಿ ಕಬ್ಬು ಬೆಳೆಗಾರರಿಗೂ ಕೊಡಿ. ರೈತರು ತಾವು ಬೆಳೆದಂಥ ಬೆಳೆಯನ್ನು ತೆಗೆದುಕೊಂಡು ಹೋಗಿ ಸುಡುವುದು ಎಂದರೆ ರೈತರಿಗೆ ಅದರಿಂದ ಬಹಳ ಅನಾನುಕೂಲವಾಗುತ್ತದೆ. ಇದಕ್ಕಿಂತ ಅನಾನುಕೂಲ ಯಾವುದೂ ಎಲ್ಲ. ಹಿಂದೆ, 1995ರಲ್ಲಿ ಇಂಥಹುದೇ ಪರಿಸ್ಥಿತಿ ಇತ್ತು. ಆಗ ಪ್ರಧಾನ ಮಂತ್ರಿಗಳಾಗಿದ್ದಂಥ ದೇವೇಗೌಡರು ನಮ್ಮಲ್ಲೆಲ್ಲ ಸಿಕ್ಕಾಪಟ್ಟೆ sugar factory ಗಳಿಗೆ license ಕೊಟ್ಟರು. ಮತ್ತೆ ಅಂಥ ಪರಿಸ್ಥಿತಿ ಈಗ ಮರುಕಳಿಸುತ್ತಿದೆ. ಆವರ್ತ ನಿಧಿ ನಮ್ಮಲ್ಲಿದೆ. ಹೆಚ್ಚಿಗೆ ಅದು ಖರ್ಚಾಗಿಲ್ಲ.

ಅದನ್ನು ಉಪಯೋಗಿಸಿ. ದಯವಿಟ್ಟು ಅಧಿಕಾರಿಗಳಿಗೆ ಹೇಳಿ, ಅವರು ಆವರ್ತ ನಿಧಿಯಿಂದ ಕಬ್ಬನ್ನು ಕೊಳ್ಳಲಿ. ಸ್ವಲ್ಪ ಕಡಿಮೆಯಾದರೂ ಕೂಡ ಆವರ್ತ ನಿಧಿಯಿಂದ ಹಣವನ್ನು ಕೊಡಬಹುದು. ಇದರ ಬಗ್ಗೆ ಅಧಿಕಾರಿಗಳ ಜೊತೆ ಚಿಂತನೆ ಮಾಡಿ ದಯವಿಟ್ಟು ಹೇಳಿ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) :- ಮಾನ್ಯ ಅಧ್ಯಕ್ಷರೆ, ಕಬ್ಬು, ಟೊಮೆಟೋ ಇಂಥವುಗಳನ್ನು ಬೆಳೆದು ತೀರಿಹೋಗಿರುವ ರೈತರಿಗಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನಿಟ್ಟುಕೊಳ್ಳಿ. ಯಾರ್ಯಾರು ತೀರಿಹೋಗಿದ್ದಾರೋ ಅವರಿಗೆ ದುಡ್ಡು ಕೊಡಿ. ತಾವು ಸ್ವಲ್ಪ ಯೋಚನೆ ಮಾಡಿ. ಬಜೆಟ್ ಮೇಲೆ ಮಾತನಾಡುವಾಗ Schedule Caste ನವರಿಗೆ ಸಾಲ ಮನ್ನಾ ಮಾಡಬೇಕೆನ್ನುವ ಬಗ್ಗೆ ಏನಾದರೂ ಹೇಳಿದಿರಾ? Scheduled Castes, Scheduled Tribes ಬೇಕು. ಆದರೆ ಅದು ಮುಗಿದ ಮೇಲೆ ನೀವು ಬರೀ ಇಂಥವುಗಳ ಬಗ್ಗೆ ಮಾತನಾಡುತ್ತೀರಿ. ಕೋಲಾರ ಜಿಲ್ಲೆಯಲ್ಲಿ ಸಾವಿರಾರು ಜನ ರೈತರು ಟೊಮೇಟೋ ಬೆಳೆದು ನಷ್ಟ ಮಾಡಿಕೊಂಡಿದ್ದಾರೆ. ಅವರಿಗೆ ದುಡ್ಡು ಕೊಟ್ಟಿರುವಿರಾ? ಇದನ್ನೆಲ್ಲ ಯೋಚನೆ ಮಾಡಿ ತಾವು ಉತ್ತರ ಕೊಡಬೇಕು.

ಶ್ರೀ ಮಿರಾಜುದ್ದೀನ್ ಪಟೇಲ್ (ಹುಮ್ನಾಬಾದ್) :- ಮಾನ್ಯ ಅಧ್ಯಕ್ಷರೆ, ಕಬ್ಬಿನ ಸಮಸ್ಯೆ ಬಗ್ಗೆ ಆಗಲೇ ಬಿ.ಆರ್.ಪಾಟೀಲ್‌ರವರು ಏನು ಹೇಳಿದರು, ಅದೇ ಸಮಸ್ಯೆ ನಮ್ಮ ಬೀದರ್ ಜಿಲ್ಲೆಯಲ್ಲಿಯೂ ಇದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಈ ಸಮಸ್ಯೆ ಇದೆ. ಕಬ್ಬು ತೆಗೆದುಕೊಂಡಿರುವ ಹಣವನ್ನು ರೈತರಿಗೆ ಮೂರು ತಿಂಗಳಿನಿಂದಲೂ ಪಾವತಿ ಮಾಡಿಲ್ಲ. Payment ಮಾಡಿಲ್ಲ ಎಂದು ನಾನು ಸದನದಲ್ಲಿ ಧರಣಿ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಸಕ್ಕರೆ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಮೂರು ಫ್ಯಾಕ್ಟರಿಗಳಿಗೆ ತಲಾ 15 ಕೋಟಿ ರೂಪಾಯಿಗಳನ್ನು Government guarantee ಕೊಟ್ಟು N.C.D.C ಯಿಂದ release ಮಾಡಿದ್ದಾರೆ. ಇನ್ನೂ ನಮ್ಮ ಜಿಲ್ಲೆಯಲ್ಲಿ ಒಂದೂವರೆಯಿಂದ ಎರಡು ಲಕ್ಷ ಟನ್‌ಗಳಷ್ಟು ಕಬ್ಬು surplus ಉಳಿದಿದೆ. ಆ ಕಬ್ಬು ಪೂರ್ತಿ ಮುಗಿಯುವವರೆಗೆ ಮಹಾರಾಷ್ಟ್ರದಲ್ಲಿ ಕೊಡುತ್ತಿರುವಂತೆ transport subsidy ಇತ್ಯಾದಿಗಳನ್ನು ಇಲ್ಲೂ ಕೊಡಬೇಕು.

ನಮ್ಮ ಬೀದರ್‌ನಲ್ಲಿ ನಾಲ್ಕು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಬ್ಬು ಎಲ್ಲಿಗೂ ಹೋಗದ ಕಾರಣ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಉಳಿದಂಥ ಕಬ್ಬಿಗೆ ನಾವು ಏನಾದರೂ ವ್ಯವಸ್ಥೆ ಮಾಡಲಿಲ್ಲವೆಂದರೆ, ರೈತರು ಇದೇ ರೀತಿ ಆತ್ಮಹತ್ಯೆ ಮಾಡಿಕೊಳ್ಳುವಂಥಾದ್ದು ಆಗುತ್ತದೆ. ಆದ್ದರಿಂದ, ಮುಖ್ಯಮಂತ್ರಿಗಳು immediate ಆಗಿ decision ತೆಗೆದುಕೊಂಡು declare ಮಾಡಿದರೆ ಅದರಿಂದ factory ಗಳವರು alert ಆಗಿ ಕಬ್ಬು ಅರೆಯುವಂಥ ವ್ಯವಸ್ಥೆ ಮಾಡುತ್ತಾರೆ. ಅದನ್ನು ಅವರು ಇಲ್ಲಿ ಹೇಳಬೇಕು ಎಂದು ನಾನು ಅವರಿಗೆ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಆಂಜನೇಯ (ಧರಮಸಾಗರ) :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ನಮ್ಮ ದಾವಣಗೆರೆ ಜಿಲ್ಲೆಗೆ ಬಂದಾಗ ಅಲ್ಲಿಯ ರೈತರು ಬಹಳ ಸಂಖ್ಯೆಯಲ್ಲಿ ಸೇರಿ ಬಹಳ ಅದ್ಧೂರಿಯಾಗಿ ಸ್ವಾಗತ ಮಾಡಿ ಅವರಿಗೆ ಒಂದು ಮನವಿಯನ್ನು ಕೊಟ್ಟರು. ದಾವಣಗೆರೆಯ ಭದ್ರಾ ಸಕ್ಕರೆ ಕಾರ್ಖಾನೆ ಬಹಳ ಹಳೆಯ ಸಕ್ಕರೆ ಕಾರ್ಖಾನೆ. ಆ ಕಾರ್ಖಾನೆ ಸ್ತಬ್ಧಗೊಂಡು ಅಲ್ಲಿನ ಕಾರ್ಮಿಕರು ಮತ್ತು ರೈತರು ಬಹಳ ಅನ್ಯಾಯಕ್ಕೊಳಗಾಗಿದ್ದಾರೆ. ಕಾರ್ಮಿಕರಿಗೆ ಕೆಲಸವಿಲ್ಲದೇ ಅವರು ಬೀದಿಗೆ ಬಂದಿದ್ದಾರೆ. ಆ ಪ್ರದೇಶದಲ್ಲಿರುವ ರೈತರು ಬೆಳೆದಂಥ ಕಬ್ಬನ್ನು ಯಾರು ಫ್ಯಾಕ್ಟರಿಗೆ ಸರಬರಾಜು ಮಾಡಬೇಕು ಎನ್ನುವುದು ಗೊತ್ತಾಗದೇ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಆ ಕಾರ್ಖಾನೆ ಮತ್ತು ರೈತರ ಬಗ್ಗೆ ಕೂಡ ಗಂಭೀರವಾದಂಥ ಒಂದು ಚಿಂತನೆ ಮಾಡಿ ಅವರಿಗೂ ಕೂಡ ನೆರವು ನೀಡಬೇಕು. ಏಕೆಂದರೆ, ಕುಮಾರಸ್ವಾಮಿಯವರನ್ನು ರೈತರು ಬಹಳ ನಂಬಿಬಿಟ್ಟಿದ್ದಾರೆ. ರೈತರಿಗೆ ಬೇಕಾದಷ್ಟು ಸೌಕರ್ಯಗಳನ್ನು ಕೊಟ್ಟು, ಪ್ರಾಣ ಕಳೆದುಕೊಳ್ಳಬೇಡಿ, ಆತ್ಮಹತ್ಯೆ ಮಾಡಿಕೊಳ್ಳಬೇಡಿ, ನಿಮ್ಮ ರಕ್ಷಣೆಗೆ ನಾನಿದ್ದೇನೆ, ಇದು ರೈತರ ಪರವಾದಂಥ ಸರ್ಕಾರ, ಇದು ಮಣ್ಣಿನ ಮಕ್ಕಳ ಸರ್ಕಾರ ಎನ್ನುವಂಥ ಮಾತುಗಳನ್ನು ಹೇಳುವುದರ ಮೂಲಕ ರೈತರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸಿದ್ದೀರಿ. ಕಬ್ಬು ಬೆಳೆದಂಥ ರೈತರ ಸಂಕಷ್ಟಕ್ಕೂ ತಾವು ಸ್ಪಂದಿಸಬೇಕು. ಅವರು ಯಾವುದೇ ರೀತಿ ಅನಾಹುತಕ್ಕೆ ಈಡಾಗದಂತೆ ಅವರ ಕಷ್ಟವನ್ನು ಪರಿಹರಿಸಬೇಕು ಎಂದು ನಾನೂ ಕೂಡ ಅಧ್ಯಕ್ಷರ ಮುಖಾಂತರ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :- ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲೂ ಕೂಡ ಇವತ್ತು ಅದೇ ಸಮಸ್ಯೆ ಉದ್ಭವವಾಗಿದೆ. ಫ್ಯಾಕ್ಟರಿಯವರು

ಕೊಡುವ ದುಡ್ಡಿಗೆ ರೈತರು ಕಬ್ಬನ್ನು ಹೊಡೆಯಲು ತಯಾರಿದ್ದರೂ ಕೂಡ, ಆ ಸಕ್ಕರೆ ಫ್ಯಾಕ್ಟರಿಯಲ್ಲಿ ಕಬ್ಬನ್ನು ಅರೆಯುವುದಕ್ಕೆ ಆಗುತ್ತಿಲ್ಲ. ಕಬ್ಬು ಬೆಳೆದಂಥ ರೈತರು ಈಗಾಗಲೇ ತಮ್ಮ ಹೊಲಗಳಿಗೆ ಬೆಂಕಿಯನ್ನು ಹಚ್ಚುತ್ತಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿಗೆ ಬರಬಾರದು. ಮುಖ್ಯಮಂತ್ರಿಗಳು ರೈತರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನಿಟ್ಟುಕೊಂಡು, ಒಳ್ಳೆಯ ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ. ಅದೇ ರೀತಿ ನಮ್ಮ ಹಾವೇರಿ ಜಿಲ್ಲೆಯ ಸಂಗೂರು sugar factory ಯ ರೈತರಿಗೂ ನ್ಯಾಯವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ವೈ. ಪಾಟೀಲ್ (ಅಫ್ಜಲ್‌ಪುರ) :- ಮಾನ್ಯ ಅಧ್ಯಕ್ಷರೆ, ಇದು ಜೇವರ್ಗಿಗಷ್ಟೇ ಸೀಮಿತವಾಗಿಲ್ಲ. ಅಫ್ಜಲ್‌ಪುರದಲ್ಲೂ ಕೂಡ ಐದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆದು ನಿಂತಿದೆ. ಅದನ್ನೂ ಕೂಡ ಇನ್ನೂ ಅರೆದಿಲ್ಲ. ನಮ್ಮ ತಾಲ್ಲೂಕಿನಲ್ಲೇ factory ಇದ್ದರೂ ಕೂಡ ಇದುವರೆಗೂ ಕಬ್ಬು ಸಾಗಾಣಿಕೆಯಾಗಿಲ್ಲ. ಅದಕ್ಕಾಗಿ, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ problem solve ಮಾಡಬೇಕು ಎಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) :- ಮಾನ್ಯ ಅಧ್ಯಕ್ಷರೆ, 1992-93 ರಲ್ಲಿ ತಾವೂ ಸಹ ಗುಲ್ಬರ್ಗಕ್ಕೆ ಬಂದಿದ್ದಿರಿ. ಮಾನ್ಯ ದೇವೇಗೌಡರೂ ಬಂದಿದ್ದರು. ತೊಗರಿ ಬೆಳೆಗಾರರು ಬಹಳ ಸಂಕಷ್ಟದಲ್ಲಿದ್ದು, ಹಾಳಾಗಿದ್ದಾಗ ಅಂದಿನ ಸರ್ಕಾರ, ಮೊಯ್ಲಿಯವರು 12 ಕೋಟಿ ರೂಪಾಯಿಗಳನ್ನು ಅದಕ್ಕೆ compensation ಎಂದು ಕೊಟ್ಟರು, relief ಕೊಟ್ಟರು. ಅಂಥ ವ್ಯವಸ್ಥೆ ಇದ್ದಾಗ ಇವತ್ತು ಸರ್ಕಾರಕ್ಕೆ ಅದರಿಂದ ಸಾವಿರಾರು ಕೋಟಿ ರೂಪಾಯಿ tax ಬರುತ್ತಿದೆ. ಆ ದೃಷ್ಟಿಯಿಂದ ಇವತ್ತು ಈ ಕಬ್ಬು ಬೆಳೆಗಾರರನ್ನು ಉಳಿಸುವುದು ಬಹಳ ಅವಶ್ಯಕತೆ ಇದೆ. ಇವತ್ತು ಅವರು suicide ಮಾಡಿಕೊಳ್ಳದೇ ಬೇರೆ ದಾರಿಯೇ ಇಲ್ಲ. ಇವತ್ತು ರೈತರ ಪರ ಸರ್ಕಾರವೆಂದು ಹೇಳಿಕೊಳ್ಳುತ್ತೀರಿ. ಆ ದೃಷ್ಟಿಯಿಂದ ತಮಗೆ ಗೊತ್ತು. ಗುಲ್ಬರ್ಗಾಕ್ಕೆ ತಾವು ಕೂಡ ಬಂದಿದ್ದೀರಿ. ಜೆಡಿ(ಎಸ್)ನ ಒಂದು ರಾಜ್ಯ ಮಟ್ಟದ ಸಭೆಯನ್ನು ನಾವು ಕರೆದಿದ್ದೆವು. ಆ rally ಯಲ್ಲಿ ನಿಮ್ಮ ನಾಯಕರು, ಮಾಜಿ ಪ್ರಧಾನ ಮಂತ್ರಿಗಳು, ತಾವು, ಅಂದಿನ ಸಮಾಜವಾದಿ ಜನತಾ ಪಕ್ಷದ ನೂರಾರು ಕಾರ್ಯಕರ್ತರು ಈ ರಾಜ್ಯದಿಂದ ಬಂದವರು ಇದ್ದರು. ಅವತ್ತಿನ ಸಭೆಯ ಪರಿಣಾಮವಾಗಿ ಆ ಭಾಗದ ತೊಗರಿ ಬೆಳೆಗಾರರಿಗೆ 12 ಕೋಟಿ ರೂಪಾಯಿ

ಸಿಕ್ಕಿತು. ಅಂಥ ಒಂದು relief ಕೊಡಲು ಇವತ್ತು ಮುಖ್ಯಮಂತ್ರಿಗಳು ಮುಂದಾಗಬೇಕೆಂದು ನಾನು ಅವರನ್ನು request ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಪಿ. ಮುನಿಯಪ್ಪ :- ಕೋಲಾರ ಜಿಲ್ಲೆಯಲ್ಲಿ ನನ್ನ ಮತಕ್ಷೇತ್ರವಾದ ಬಂಗಾರುಪೇಟೆಯಲ್ಲಿ 7ನೇ ತಾರೀಖು ರಾತ್ರಿ ದೊಡ್ಡೂರು ಗ್ರಾಮ ಎನ್ನತಕ್ಕಂಥ....

ಅಧ್ಯಕ್ಷರು :- ಮಾನ್ಯ ಮುನಿಯಪ್ಪನವರೆ, ಕಬ್ಬಿನ ವಿಚಾರವಾಗಿ ಏನಾದರೂ ಮಾತನಾಡಿ. ಬೇರೆಯ ವಿಚಾರವಿದ್ದರೆ, ಅನಂತರ ಅವಕಾಶ ಕೊಡುತ್ತೇನೆ.

ಶ್ರೀ ಎ.ಬಿ. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು purchase tax ಅನ್ನು ದಿ: 1-4-07 ರಿಂದ ಬಿಡುತ್ತಿದ್ದೇನೆಂದು ಹೇಳುತ್ತಿದ್ದಾರೆ. ಕಬ್ಬಿನ ಪಂಗಾಮು ಕಳೆದ October ನಿಂದ start ಆಗಿದೆ. ಯಾವುದೇ ರೈತರಿಗೂ ಕೂಡ ಇದರಿಂದ benefit ಸಿಗುವುದಿಲ್ಲ. ಇದಕ್ಕಿಂತ ಹಿಂದಿನಿಂದಲೇ ಜಾರಿಗೆ ಕೊಡಬೇಕು. ದಿನಾಂಕ 1-4-07 ಕ್ಕಿಂತ ಮುಂಚಿತವಾಗಿ, ಹಿಂದೆ ನಾವು September, October ನಿಂದ ಏನು ನಡೆಸುತ್ತಿದ್ದೇವೆ, ಅದರಿಂದ ಇವತ್ತು purchase tax 65 ರೂಪಾಯಿಗಳನ್ನು ಸಾಫ್ ಮಾಡಬೇಕೆಂದು ತಮ್ಮ ಮುಖಾಂತರ ಹಣಕಾಸಿನ ಮಂತ್ರಿಗಳಿಗೆ ಮತ್ತು ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ತಾವು ಹೇಳಬೇಕೆಂದು ಹೇಳಿ ಈ ಮೂಲಕ ಅವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು) :- ಇವತ್ತು ಇಡೀ ರಾಜ್ಯದಲ್ಲಿ ಕಬ್ಬು ಬೆಳೆಗಾರರು ತೊಂದರೆಯಲ್ಲಿರುವ ಬಗ್ಗೆ ಯಾರೂ question ಮಾಡುವ ಹಾಗಿಲ್ಲ. ಏಕೆಂದರೆ, ಹಿಂದೆ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದ, ಪ್ರಧಾನಮಂತ್ರಿಗಳಾಗಿದ್ದ ಕಾಲದಲ್ಲಿ ಉತ್ತರ ಪ್ರದೇಶದಲ್ಲಿ 1 ಸಾವಿರ ಕೋಟಿ ರೂಪಾಯಿ ಕಬ್ಬು ಬೆಳೆಗಾರರ ಬಾಕಿ ಇತ್ತು. ಅದನ್ನು ಅವತ್ತು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇಲ್ಲಿ ಮಾನ್ಯ ಧರ್ಮಸಿಂಗ್ ಸಾಹೇಬರಿದ್ದಾರೆ. ಅವರು ಬೆಳಿಗ್ಗೆ ಸುಮಾರು ಒಂದು ಗಂಟೆ ಚರ್ಚೆ ಮಾಡಿದರು. ಅದೇನೂ ಪ್ರಯೋಜನವಾಗಲಿಲ್ಲ. ಇದರ ಬಗ್ಗೆಯಾದರೂ ತಾವು ಕೇಂದ್ರ ಸರ್ಕಾರದ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಹೇಳಿದರೆ ಸ್ವಲ್ಪ ಅನುಕೂಲವಾಗುವುದು. ಅದಕ್ಕೆ ತಾವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕು. ಕಬ್ಬು ಬೆಳೆಗಾರರ ರಕ್ಷಣೆ ಮಾಡಬೇಕಾಗುತ್ತದೆ. ಕಬ್ಬು ಬೆಳೆಗಾರರಿಗೆ ರಾಜ್ಯ ಸರ್ಕಾರ Transportation cost ಅನ್ನು ಕೊಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರ ಹೊಸ

ಕಾರ್ಖಾನೆಗಳನ್ನು ತೆರೆಯುವ ದೃಷ್ಟಿಯಲ್ಲಿ ಮುಂದಿನ ದಿನಗಳಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ, ನಮ್ಮ ರೈತರ ಸಹಾಯಕ್ಕೆ ಬರಬೇಕು. ಕೆಲವು ಕಡೆ 6 ಜಿಲ್ಲೆಗಳಲ್ಲಿ suicide ಮಾಡಿಕೊಂಡಿದ್ದಾರೆ. ಬೆಳಗಾಂ ಜಿಲ್ಲೆ, ಹಾಸನ ಜಿಲ್ಲೆ, ಶಿವಮೊಗ್ಗ ಜಿಲ್ಲೆಯಲ್ಲಿ suicide ಮಾಡಿಕೊಂಡಿದ್ದಾರೆ. ಈ ಭಾಗಗಳಲ್ಲಿ ಹೆಚ್ಚು ಕಬ್ಬು ಬೆಳೆಯುತ್ತಾರೆ. ಆ suicide package ನಲ್ಲಿ ಈ Sugar factory ಯಾವ್ಯಾವುವು losses ನಲ್ಲಿವೆ, ಅದಕ್ಕಾದರೂ ಹಣ ಕೊಟ್ಟರೆ ಒಳ್ಳೆಯದೆಂದು ನಾನು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ಚಂದ್ರಣ್ಣ :– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಕೇಂದ್ರ ಸರ್ಕಾರವೂ ಸಹ ಸಹಾಯಕ್ಕೆ ಬರಬೇಕಾಗುತ್ತದೆ. ಏಕೆಂದರೆ, ಕೇವಲ ರಾಜ್ಯ ಸರ್ಕಾರದಿಂದಲೇ ಆಗಬೇಕೆಂದು ನಾವೆಲ್ಲರೂ ಮಾತನಾಡುತ್ತೇವೆ. ಕೇಂದ್ರ ಸರ್ಕಾರದ ಮೇಲೆಯೂ ಒತ್ತಡ ತರಬೇಕು. ಆ ದಿಕ್ಕಿನಲ್ಲಿಯೂ ಚರ್ಚೆಯಾದರೆ ಒಳ್ಳೆಯದು.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ನಾನು ಮೊನ್ನೆ ಬಜೆಟ್ ಮೇಲೆ ಮಾತನಾಡುವಾಗಲೂ ಹೇಳಿದ್ದೇನೆ. ಮಹಾರಾಷ್ಟ್ರದಲ್ಲಿ ಕೂಡ ಇದಕ್ಕೆ ಹೆಚ್ಚಿನ ಹಣವನ್ನು ಕೊಡುವ ರೀತಿಯಲ್ಲಿ ತಾರತಮ್ಯವನ್ನು ಸರಿಪಡಿಸಿ ಅಲ್ಲಿ ರೈತರ ಸಹಾಯಕ್ಕೆ ಬಂದಿದ್ದಾರೆ. ನಾನು ಒಪ್ಪುತ್ತೇನೆ. ಮಾನ್ಯ ಶರದ್ ಪವಾರ್‌ರವರು ಕೂಡ ಬೆಂಗಳೂರಿಗೆ ಬಂದಿದ್ದಾಗ ಅವರ ಜೊತೆಯಲ್ಲಿ ಕೂಡ ಮಾತುಕತೆಯಾಗಿದೆ. ಅವರ ಹತ್ತಿರ ಹೋಗಿ ಕೂಡ ಮಾಡೋಣ. ಆದರೆ, ಇವತ್ತೇನು ರೈತರು ಸಂಕಟದಲ್ಲಿ ಸಿಕ್ಕಿಬಿದ್ದಿದ್ದಾರೆ, ಎಲ್ಲಿ ಸಹಾಯ ಮಾಡಬೇಕಾಗಿದೆ you have to give protection. Subsidy ಕೊಡುವ ರೀತಿಯಲ್ಲಿ, ಅದಕ್ಕೇ ನಾವು ಉಪಮುಖ್ಯಮಂತ್ರಿಗಳಿಗೆ ಹೇಳುವುದು, ಇವತ್ತು non productive ಗೆ ಹೆಚ್ಚಿನ ಹಣವನ್ನು ಕೊಟ್ಟು ಘೋಷಣೆ ಮಾಡಿದರಲ್ಲ, ಇವತ್ತು ರೈತರ ಸಹಾಯಕ್ಕೂ ಬರಬೇಕು. We are not exaggerating the problem. ಇವತ್ತು ಬಿ.ಆರ್.ಪಾಟೀಲರು, ಬೇರೆ ಸದಸ್ಯರು ಪ್ರಸ್ತಾಪ ಮಾಡಿರುವುದು ಪ್ರಸ್ತುತ.

ನನ್ನ constituency ಯಲ್ಲಿ ಎಂದೂ ಕೂಡ ಈ ತರಹ ರೈತರು ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಕಾಲದಲ್ಲಿ ಜಿಲ್ಲಾಧಿಕಾರಿಗಳು ಇಲ್ಲಿ ಇದ್ದಾರೆ. ತಮ್ಮ ಜಿಲ್ಲಾಧಿಕಾರಿಗಳ ಸಭೆಯನ್ನು ಮೊನ್ನೆ ಕರೆದು ಮಾತನಾಡಿದ್ದೀರಿ. ಅವರೇನು ಮಾಡುತ್ತಿದ್ದಾರೆ? ನಾವು ಆತ್ಮಹತ್ಯೆ

ಮಾಡಿಕೊಳ್ಳುತ್ತೇವೆಂದು ಮೊದಲೇ notice ಕೊಟ್ಟಿದ್ದಾರೆ. ಯಾರ ಡಿ.ಸಿ.ಯೂ ಅಲ್ಲಿ they are not visiting this spot. ಯಾವ ಅಧಿಕಾರಿಗಳೂ ಹೋಗಿ ಅಲ್ಲಿ ಸಮಾಲೋಚನೆ ಮಾಡಿ ತಮ್ಮ ಇತಿಮಿತಿಯಲ್ಲಿ ಅದನ್ನು ಪರಿಹರಿಸುವ ಪ್ರಯತ್ನಮಾಡುತ್ತಿಲ್ಲ. ಅದಕ್ಕೆ ನೇರವಾಗಿ ಹೇಳುವುದೇನೆಂದರೆ, ಜಿಲ್ಲಾಡಳಿತವೇನಿದೆ, ಅದು ಸರಿಯಾದ ರೀತಿಯಲ್ಲಿ ಕೆಲಸ ಮಾಡಿಲ್ಲ. ಸರ್ಕಾರ ಇವತ್ತಿನ ದಿವಸ ಸುಮ್ಮನೆ ಹೇಳಿಕೆ ಕೊಡತಕ್ಕಂಥದ್ದಲ್ಲ. ಇವತ್ತು ಸದನದಲ್ಲಿ ಕಬ್ಬು ಬೆಳೆಗಾರರ ಬಗ್ಗೆ ಸಮಸ್ಯೆಯನ್ನು ಪರಿಹಾರ ಮಾಡುವ ಬಗ್ಗೆ ನಾವು ಕೇಳಿಕೊಳ್ಳುತ್ತಿದ್ದೇವೆ.

ಇವತ್ತು ರಾಜ್ಯದ ಮುಖ್ಯಮಂತ್ರಿಗಳು ಸಹ ಸದನದಲ್ಲಿದ್ದಾರೆ. You have to give a message. ಒಂದು ಸಂದೇಶ ಕೊಡಬೇಕು. ಅದರ ಬಗ್ಗೆ ಸಮಾಲೋಚನೆ ಮಾಡುತ್ತೇವೆ, ಮಾತನಾಡುತ್ತೇವೆ. ಅಲ್ಲಿರುವ ರೈತರನ್ನು ಕೂಡ ಕರೆಸಿ, ಸಂಬಂಧಪಟ್ಟ ಶಾಸಕರ ಜೊತೆ ಸಮಾಲೋಚನೆ ಮಾಡಿ. ಯಾವಾಗಲೂ ಕೂಡ ಬಹಳಷ್ಟು ಸಮಸ್ಯೆ ಗಂಭೀರವಾಗಿ ಬೆಳೆಯಲು ಹೊರಟಾಗ ನಾವು anticipate ಮಾಡಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಸರಿಯಾದ ಉತ್ತರ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ್ರ ಈಶ್ವರಗೌಡ (ಕಲಘಟಗಿ) :– ಕಬ್ಬಿನ ವಿಚಾರದ ಬಗ್ಗೆ ಈಗಾಗಲೇ ಇವತ್ತಿನ ಸಂಯುಕ್ತ ಕರ್ನಾಟಕ ಪೇಪರ್‌ನಲ್ಲಿ ಬಂದಿದೆ. ಕಲಘಟಗಿ ಕ್ಷೇತ್ರದೊಳಗೆ ಒಂದು ಸಾವಿರ ಎಕರೆಯಲ್ಲಿ ಕಬ್ಬು ಬೆಳೆದಿದ್ದಾರೆ. ಇವತ್ತು ಹಾವೇರಿಯವರು ಇರಬಹುದು, ಮುಧೋಳ factory ಯವರಿರಬಹುದು, ರೈತರಿಗೆ ಸಾಲ ಕೊಟ್ಟು, ಅವರ ಉದರಿ ತೆಗೆದುಕೊಂಡು ಅವರಿಗೆ permission ಕೊಟ್ಟಿದ್ದಾರೆ. ಒಂದು ಸಾವಿರ ಎಕರೆ ಕಬ್ಬು ಬೆಳೆದರೆ 2–3 ಕ್ವಿಂಟಾಲ್‌ನಷ್ಟು ಸಹ ಖರೀದಿ ಮಾಡಿಲ್ಲ. ನಾನೇ 4–5 ಸಲ ಮುಧೋಳಕ್ಕೆ ಹೋಗಿ ಬಂದಿದ್ದೇನೆ. ಆದರೆ, ಜಾಗ ಕೇಳುತ್ತೀರಿ ಎಂದು ಇವತ್ತಿನವರೆಗೂ ಅವರು ಕಳುಹಿಸಿಲ್ಲ. ಇವತ್ತೇನು ಪೇಪರ್‌ನಲ್ಲಿ ಬಂದಿದೆ ಅದನ್ನು ಮಧ್ಯಾಹ್ನ ನಂತರ ತಮಗೆ ತಂದುಕೊಡುತ್ತೇನೆ, ಅದನ್ನು ನೋಡಿ. ದಯಮಾಡಿ, ಮುಖ್ಯಮಂತ್ರಿಗಳೆ, ಕಬ್ಬು ಬೆಳೆದಿರತಕ್ಕಂಥ ಎಲ್ಲ ರೈತರು ಇವತ್ತು ಆತ್ಮಹತ್ಯೆ ಮಾಡಿಕೊಳ್ಳುವಂಥ ಸಂದರ್ಭ ಬಂದಿದೆ. ಆದಕಾರಣ, ತಾವು ದಯಮಾಡಿ, ಇವತ್ತು ಇಡೀ ರಾಜ್ಯದ ರೈತರನ್ನು ಏನು ಕರೆಸುತ್ತೀರಿ, ಅಂಥ ಸಂದರ್ಭದಲ್ಲಿ ಕಲಘಟಗಿಯನ್ನೂ ಗಣನೆಗೆ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) :– ಸನ್ಮಾನ್ಯ ಅಧ್ಯಕ್ಷರೆ, ಬಿ.ಸಿ.ಪಾಟೀಲರು ನಮ್ಮ ಹಾವೇರಿ ಜಿಲ್ಲೆಯ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿ ಬಗ್ಗೆ ಮಾತನಾಡಿದ್ದಾರೆ. ಅಲ್ಲಿ ಹೊಳೆಯಲ್ಲಿ ಇವತ್ತು ನೀರು ಪೂರ್ತಿ ಮುಗಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ರೇಣುಕಾ ಸಕ್ಕರೆ ಕಾರ್ಖಾನೆಯವರು ಅದನ್ನು ಲೀಸ್‌ಗೆ ತೆಗೆದುಕೊಂಡಿದ್ದಾರೆ. ಅಲ್ಲಿ ಹೊಳೆಯಲ್ಲಿ ನೀರು ಮುಗಿದ ತಕ್ಷಣ ಆ ಕಾರ್ಖಾನೆ ನಡೆಯುವುದನ್ನು ಬಂದ್ ಮಾಡಬೇಕೆಂದು ಚಿಂತನೆ ಪ್ರಾರಂಭವಾಗುತ್ತಿದೆ. ಅದಕ್ಕೆ ಹಾನಗಲ್ ತಾಲ್ಲೂಕಿನ, ನರೇಗಲ್ ಕೆರೆಯಿಂದ ನೀರು ತಂದು ಕಾರ್ಖಾನೆಯನ್ನು ನಡೆಸುವುದಕ್ಕೆ ಸಾಧ್ಯತೆ ಇರುವುದರಿಂದ, ರೇಣುಕಾ ಸಕ್ಕರೆ ಕಾರ್ಖಾನೆಯವರನ್ನು ಮತ್ತು ಅಲ್ಲಿಯ ಆಡಳಿತ ಮಂಡಳಿಯವರನ್ನು ಕರೆಸಿ, ಹೊಳೆಯಲ್ಲಿ ನೀರು ಮುಗಿದರೂ ನಾವು ಕೆರೆಯಿಂದ ನೀರು ತಂದು ಕಾರ್ಖಾನೆಯನ್ನು ಕಬ್ಬು ಮುರಿಯುವವರೆಗೂ ಚಾಲೂ ಇಡುತ್ತೇವೆ ಎನ್ನುವ ಒಂದು ಮೆಸೇಜ್ ರೈತರಿಗೆ ಹೋಗಬೇಕಾಗಿದೆ. ಇಲ್ಲದೇ ಹೋದರೆ, ರೈತರು ಬಹಳ ಸಂಕಷ್ಟದಲ್ಲಿದ್ದು ಆತ್ಮಹತ್ಯೆ ಮಾಡಿಕೊಳ್ಳುವ ಮತ್ತು ಕಬ್ಬನ್ನು ಸುಡುವಂಥ ಒಂದು ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ರೇಣುಕಾ ಸಕ್ಕರೆ ಕಾರ್ಖಾನೆಯವರನ್ನು ಕರೆಸಿ ಕಬ್ಬು ಮುಗಿಯುವವರೆಗೂ ಕೆರೆಯಿಂದ ನೀರು ಸರಬರಾಜು ಮಾಡಿಕೊಂಡು ಕಾರ್ಖಾನೆಯನ್ನು ಚಾಲೂ ಇಡಬೇಕೆಂದು ರೇಣುಕಾ ಸಕ್ಕರೆ ಕಾರ್ಖಾನೆಯವರಿಗೆ ತಾವು ಆದೇಶವನ್ನು ಕೊಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :– ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರಾದ ಸಜ್ಜನರ್‌ರವರು ಹೇಳಿದರು. ಯಾವತ್ತು factory ಪ್ರಾರಂಭ ಮಾಡಬೇಕಾಗಿತ್ತೋ, ಅವತ್ತು factory ಪ್ರಾರಂಭವಾಗಲಿಲ್ಲ. ಹೊಳೆಯಲ್ಲಿ, ಕೆರೆಯಲ್ಲಿ ನೀರಿದ್ದಾಗ ಆ factory ಪ್ರಾರಂಭ ಮಾಡುವುದು ಬಿಟ್ಟು ಬೇಸಿಗೆಯಲ್ಲಿ ಜನವರಿಯಾದ ನಂತರ ಆ factory ಯನ್ನು ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಹಲವಾರು ಕಾರಣಗಳೂ ಇವೆ. ಇವತ್ತು ಸುಮ್ಮನೆ ಕೆರೆಯಲ್ಲಿ ನೀರಿಲ್ಲವೆಂದು factory ಯನ್ನು ಬಂದ್ ಮಾಡುತ್ತೇವೆಂದಲ್ಲ. ಯಾವತ್ತು ವರದಾ ನದಿಯಲ್ಲಿ ನೀರು ಹರಿಯುತ್ತಿತ್ತೋ, ಅವತ್ತು factory ಪ್ರಾರಂಭ ಮಾಡಿದ್ದರೆ, ಇವತ್ತು ರೈತರಿಗೆ ಈ ಕಷ್ಟ ಬರುತ್ತಿರಲಿಲ್ಲ. ಸುಮ್ಮನೆ ಹೊಳೆಯಲ್ಲಿ ನೀರಿಲ್ಲವೆಂದು ಹೇಳುವುದು ಸೂಕ್ತವಲ್ಲ. ಪರಿಹಾರ ಒದಗಿಸುವುದಾಯಿತು. ಆದರೆ, ಯಾವಾಗ ಪ್ರಾರಂಭ ಮಾಡಬೇಕಾಗಿತ್ತೋ ಆಗ ಪ್ರಾರಂಭವಾಗಿದ್ದರೆ, ಈ ಸಮಸ್ಯೆ ರೈತರಿಗೆ ಬರುತ್ತಿರಲಿಲ್ಲ.

ಶ್ರೀ ಶಿವರಾಜ್ ಸಜ್ಜನರ್ :– ಅದಕ್ಕೆ ಅನೇಕ ಕಾರಣಗಳಿವೆ. ಅಲ್ಲಿ ಕಾರ್ಮಿಕರು ತೊಂದರೆ ಮಾಡಿದರು.

(ಗೊಂದಲ)

ಅಧ್ಯಕ್ಷರು :– ಆಯಿತು. ನಿಮ್ಮ ಕಾರ್ಖಾನೆಗಳು, ಕಬ್ಬು ಬೆಳೆಗಾರರ ಬಗ್ಗೆ ಮಾತನಾಡಿ ಎಂದರೆ ನಿಮ್ಮ ವಿಚಾರಗಳನ್ನೆಲ್ಲ ಹೇಳುತ್ತೀರಿ. ನಿಮ್ಮ ಊರಿನ ವಿಚಾರವೆಲ್ಲ ಇಲ್ಲಿ ತಂದುಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿ) :– ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಜೇವರ್ಗಿ ತಾಲ್ಲೂಕಿನ ಕೆಲವು ರೈತರು ಕಬ್ಬು ಬೆಳೆದು ಆರ್ಥಿಕವಾಗಿ ತೊಂದರೆಗೆ ಒಳಗಾಗತಕ್ಕಂಥ ಒಂದು ಸನ್ನಿವೇಶದಿಂದ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಘಟನೆ ನಡೆದಿದೆ ಎನ್ನುವ ವಿಚಾರವನ್ನು ಸದನದಲ್ಲಿ ಹೇಳಿದ್ದಾರೆ. ಬಹುಶಃ ಕಬ್ಬನ್ನು ಬೆಳೆದಿರುವ ರೈತರ ವಿಷಯದಲ್ಲಿ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿ ನೋಡಿದರೆ ಈ ಸರ್ಕಾರದಲ್ಲಿ ನಡೆದಷ್ಟು ಸಭೆಗಳು ಇನ್ಯಾವುದೇ ಸರ್ಕಾರದಲ್ಲಿ ಯಾರೂ ನಡೆಸಲಿಲ್ಲವೆಂಬುದು ಗೊತ್ತಾಗುತ್ತದೆ. ನಾನೇ ಸುಮಾರು 8–10 ಸಭೆಗಳನ್ನು ನಡೆಸಿದ್ದೇನೆ. ನಾನು ರೈತರ ಬಗ್ಗೆ ಚರ್ಚೆಯನ್ನು ಮಾಡಲಿಕ್ಕೆ ಸಕ್ಕರೆ ಕಾರ್ಖಾನೆಗಳ ಮಾಲೀಕರನ್ನು ಕರೆದರೆ, ಸಕ್ಕರೆ ಕಾರ್ಖಾನೆಗಳ ಮಾಲೀಕರು ಅನುಭವಿಸುವ ತೊಂದರೆಗಳೇನಿವೆ, ಆ ವಿಷಯವನ್ನೇ ಹೆಚ್ಚು ಪ್ರಸ್ತಾಪ ಮಾಡತಕ್ಕಂಥ ಘಟನೆಗಳು ನಡೆಯುತ್ತವೆ.

ಕಳೆದ ಆರು ತಿಂಗಳಿನಿಂದ ನಾವು ಹಲವಾರು ಸಭೆಗಳನ್ನು ನಡೆಸಿದ್ದೇವೆ. ಕಬ್ಬು ಬೆಳೆಗೆ ಬೆಲೆಯನ್ನು ನಿಗದಿಪಡಿಸುವುದಕ್ಕೂ ಸಕ್ಕರೆ ಕಾರ್ಖಾನೆಗಳ ಮಾಲೀಕರ ಮೇಲೆಯೂ ಸರ್ಕಾರದ ಮುಖಾಂತರ ಒತ್ತಡಗಳನ್ನು ತಂದು ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಪ್ರಯತ್ನಪಟ್ಟಿದ್ದೇನೆ, ಅದಕ್ಕೆ ನಾನು ಯಾವುದೇ ರೀತಿಯ ಪ್ರಚಾರವನ್ನು ಪಡೆಯಲಿಕ್ಕೆ ಹೋಗಿಲ್ಲ. ಏಕೆಂದರೆ, ಈ ಬಜೆಟ್‌ನ ವಿಷಯದಲ್ಲಿ ಇತ್ತೀಚೆಗೆ ಏನು ಪ್ರತಿ ನಿತ್ಯ ಸದನದಲ್ಲಿ ನಡೆಯತಕ್ಕಂಥ ಚರ್ಚೆಗಳಿರಬಹುದು, ಸದನದ ಹೊರಗಡೆ ನಡೆಯುತ್ತಿರತಕ್ಕಂಥ ಚರ್ಚೆಗಳಿರಬಹುದು, ಇದರ ಬಗ್ಗೆಯೂ ನಾನು ಇವತ್ತಿನವರೆಗೆ ಚಕಾರ ಎತ್ತಿಲ್ಲ. ಇದರಲ್ಲಿ ಯಾರ್‍ಯಾರ ಪಾತ್ರ ಎಷ್ಟಿದೆ? ಇದರ ಪ್ರಚಾರದಿಂದ ಯಾರ್‍ಯಾರಿಗೆ vote bank ಆಗಿ ಪರಿವರ್ತನೆ ಮಾಡಿಕೊಳ್ಳಬೇಕು ಎಂದಿದೆ ಇದರ ಬಗ್ಗೆ ನಾನು ಇವತ್ತಿನವರೆಗೂ ಗಮನಹರಿಸಲಿಕ್ಕೆ ಹೋಗಿಲ್ಲ.

ಇವತ್ತು ಬಜೆಟ್‌ನ ಬಗ್ಗೆ ಸನ್ಮಾನ್ಯ ಎಲ್ಲ ನಾಯಕರು ನಮಗೆಲ್ಲ ಛೀಮಾರಿ ಹಾಕಿದರು, "ಜೆಡಿ(ಎಸ್) ಸತ್ತೇ ಹೋಯಿತು, ನೀವೆಲ್ಲ ಬಿ.ಜೆ.ಪಿ.ಜೊತೆ ಸೇರಿ ಜೆಡಿ(ಎಸ್) ಪಕ್ಷವನ್ನು ಸಾಯಿಸಿಯೇಬಿಟ್ಟಿರಿ" ಎನ್ನುವ ರೀತಿಯಲ್ಲಿ ಬಗ್ಗೆ ಚರ್ಚೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಯಾರ್ಯಾರು, ಏನೇನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವ ವಿಷಯವನ್ನು ಮುಂದಿನ ದಿನಗಳಲ್ಲಿ ರಾಜ್ಯದ ಜನತೆಯ ತೀರ್ಮಾನಕ್ಕೆ ಬಿಡೋಣ. ಇವತ್ತೇನು ರೈತರು ಸಂಕಷ್ಟಕ್ಕೊಳಗಾಗಿದ್ದಾರೆ, ಹೆಚ್ಚಿಗೆ ಕಬ್ಬು ಬೆಳೆಯನ್ನು ಬೆಳೆದು ಇವತ್ತು ಸಕ್ಕರೆ ಕಾರ್ಖಾನೆಗಳು ಈ ಕಬ್ಬನ್ನು ಖರೀದಿ ಮಾಡಲ, ಕಬ್ಬನ್ನು ಅರೆಯುವುದಕ್ಕೆ ಸಾಮರ್ಥ್ಯವೇನು ಕಡಿಮೆ ಇದೆ, ಬೆಳೆದಿರುವ ಹೆಚ್ಚುವರಿ ಕಬ್ಬನ್ನು ಕಾರ್ಖಾನೆಗಳಲ್ಲಿ ತೆಗೆದುಕೊಳ್ಳತಕ್ಕಂಥಾದ್ದು ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಇವತ್ತು ಬೆಳಗ್ಗೆಯೇ ನಾನೊಂದು ನಿರ್ಣಯ ಮಾಡಿದೆ. ಬೆಳಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಯಾವ್ಯಾವ ಜಿಲ್ಲೆಗಳಲ್ಲಿ ಕಬ್ಬನ್ನು ಬೆಳೆಯುವ ಜಿಲ್ಲೆಗಳಿವೆ, ಎಲ್ಲಾ ಜಿಲ್ಲೆಗಳ ಜನಪ್ರತಿನಿಧಿಗಳು, ರಾಜ್ಯದಲ್ಲಿರುವ ಎಲ್ಲ ಸಕ್ಕರೆ ಕಾರ್ಖಾನೆಗಳು, cooperative institutions ಇರಬಹುದು, ಖಾಸಗಿ ಕಾರ್ಖಾನೆಗಳಿರಬಹುದು, ಅವುಗಳ ಎಲ್ಲ ಮಾಲೀಕರನ್ನು ಸಭೆಗೆ ಇವತ್ತೇ ಕರೆಯಬೇಕು ಎನ್ನುವ ನಿರ್ಧಾರ ಮಾಡಿದೆ. ಆದರೆ, ರಾಜ್ಯದಾದ್ಯಂತ ಇರುವ ಸಕ್ಕರೆ ಕಾರ್ಖಾನೆಗಳ ಮಾಲೀಕರಿರಬಹುದು, ರೈತ ಮುಖಂಡರುಗಳಿರಬಹುದು ಹಾಗೂ ಜನ ಪ್ರತಿನಿಧಿಗಳು ಬರುವುದಕ್ಕೆ ಇವತ್ತು ಸಮಯ ಸಾಕಾಗುವುದಿಲ್ಲವೆಂಬುದನ್ನು ನನ್ನ ಗಮನಕ್ಕೆ ತಂದ ನಂತರ, ನಾಳೆ ಸಾಯಂಕಾಲ 4.30 ಗಂಟೆಗೆ ಸಭೆ ಕರೆದಿದ್ದೇನೆ.

ಆ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ಮಾಡಿ, ಮಹಾರಾಷ್ಟ್ರ ಸರ್ಕಾರವಿರಬಹುದು, ಬೇರೆ ರಾಜ್ಯಗಳ ಸರ್ಕಾರಗಳು ಕಬ್ಬು ಬೆಳೆದ ರೈತರನ್ನು ಈ ಸಂಕಷ್ಟದಿಂದ ಪಾರು ಮಾಡತಕ್ಕಂಥಾದ್ದಕ್ಕೆ ಏನು ತೀರ್ಮಾನ ಮಾಡಿವೆ ಆ ಬಗ್ಗೆ ಎಲ್ಲ ವಿವರ ಪಡೆದು ರೈತರನ್ನು ಉಳಿಸುವಂಥ ಕೆಲಸ ಮಾಡಲಿಕ್ಕೆ ನಾಳೆ ಸಾಯಂಕಾಲ ತೀರ್ಮಾನ ಮಾಡಬೇಕು. ಕಾರ್ಖಾನೆಗಳಲ್ಲಿ ಸಕ್ಕರೆ ಬೆಲೆ ಕಡಿಮೆಯಾಗಿರುವಂಥ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಗಳೂ ಉಳಿಯುವುದು ಕಷ್ಟವಿದೆ ಎನ್ನುವ ಒಂದು ಕಾರಣವನ್ನು ಮುಂದಿಡುತ್ತಾ, ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯುವ ಕೆಲಸವನ್ನು ನಿಲ್ಲಿಸಬೇಕಾಗುತ್ತದೆಂದೇನು ನನ್ನ ಗಮನಕ್ಕೆ ತಂದಿದ್ದಾರೆ, ಈಗಾಗಲೇ ನಾನು ಅವರಿಗೆ ಮನವಿ ಮಾಡಿ, ನೀವು ಆ ಕೆಲಸ ಮಾಡಬಾರದು, ಇವತ್ತು ರೈತರನ್ನು ಉಳಿಸಬೇಕಾದಂಥ ಸನ್ನಿವೇಶದಲ್ಲಿ ನಿಮ್ಮಗಳ ಸಹಕಾರವೂ ಬೇಕೆಂದು ಹೇಳಿದ್ದೇನೆ.

ನಾಳೆ ಸರ್ಕಾರದಿಂದ ಅಂತಿಮವಾಗಿ, ರೈತರನ್ನು ಉಳಿಸುವುದಕ್ಕೆ ತೀರ್ಮಾನವೇನು ಮಾಡಬೇಕಾಗುತ್ತದೆ, ಆ ತೀರ್ಮಾನವನ್ನು ಮಾಡುತ್ತೇನೆ. Subsidy ಇರಬಹುದು, purchase tax ವಿಷಯದಲ್ಲಿರಬಹುದು, ಏನು ತೀರ್ಮಾನಗಳನ್ನು ಮಾಡಬೇಕೋ, ನಾಳೆ ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುತ್ತೇನೆ. ಜನ ಪ್ರತಿನಿಧಿಗಳಾದ ನಿಮ್ಮ ಮುಖಾಂತರವೇ ಮಾಡುತ್ತೇನೆ.

ಈ credit ಅನ್ನು ಬೇರೆ ಯಾರಾದರೂ ತೆಗೆದುಕೊಳ್ಳಬಹುದು, ಈ ವಿಷಯದಲ್ಲಿ ಯಾರಾದರೂ ಬೇಕಾದಷ್ಟು ಯಾತ್ರೆ ಮಾಡಬಹುದು, ನಾನು ಬೇಡವೆಂದು ಹೇಳುವುದಿಲ್ಲ. ನಾನು ಪ್ರಚಾರಕ್ಕಿಂತ ಹೆಚ್ಚಾಗಿ ನನ್ನ ಜನರನ್ನು ಉಳಿಸುವುದಕ್ಕೆ ಈ ಸರ್ಕಾರದ ಮುಖಾಂತರ ಏನು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನಾನು positive ಆಗಿ, ರೈತರ ಸಂಕಷ್ಟವನ್ನು ಪಾರು ಮಾಡುವುದಕ್ಕೆ ನಾಳೆ ಸಾಯಂಕಾಲ ಸರ್ಕಾರದಿಂದ ಕೆಲವು ಪ್ರಕಟಣೆಗಳನ್ನು ಮಾಡಲಿಕ್ಕೆ ತೀರ್ಮಾನ ಮಾಡಿದ್ದೇನೆ. ಇವತ್ತು ಸದನದ ಸದಸ್ಯರಾದ ತಾವೆಲ್ಲ ಪಕ್ಷಬೇಧ ಮರೆತು ರೈತರ ಪರವಾಗಿ ಇಲ್ಲೇನು ಚರ್ಚೆ ಮಾಡಿದ್ದೀರಿ, ನಿಮ್ಮ ಮನಸ್ಸಿನಲ್ಲಿ ರೈತರ ಬಗ್ಗೆ ಕಾಳಜಿ ಏನಿದೆ, ಅದು ನನಗರ್ಥವಾಗುತ್ತದೆ. ನಿಮ್ಮ ಸಲಹೆಗಳೇನಿವೆ, ಅದನ್ನೆಲ್ಲ ಪಡೆದು ಅಂತಿಮವಾಗಿ ರೈತರನ್ನು ಸಂಕಷ್ಟದಿಂದ ಪಾರು ಮಾಡುವುದಕ್ಕೆ ಸರ್ಕಾರದಿಂದ ಕೆಲವು ನೆರವನ್ನು ಘೋಷಣೆ ಮಾಡತಕ್ಕಂಥ ತೀರ್ಮಾನ ಮಾಡಿದ್ದೇನೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :– ನಾಳೆ ಸಾಯಂಕಾಲ 4.30 ಗಂಟೆಗೆ ಸಭೆಯಲ್ಲಿ ಚರ್ಚೆ ಮಾಡೋಣ. ಇವತ್ತು ಮುಂಜಾನೆ 11.30 ಗಂಟೆ ಸಮಯದಲ್ಲಿ ಸುಬ್ಬಣ್ಣ, ಶಂಕರಪ್ಪ, ಮುರುಗನ್, ಭೀಮರಾಯ ಶರಣಪ್ಪ ಯಲಗೋಡ್, ರೇವಣ ಸಿದ್ದಪ್ಪ, ಭೀಮರಾಯ ಗೌಡ ಕುರ್ಲಳ್ಳಿ, ಮಲ್ಲಣ್ಣ ಸಿದ್ದರಾಮ ಕುರ್ಲಳ್ಳಿ, ಗುಂಡು ತಂಗು ರಾಥೋಡ್, ಶಿವಶರಣಪ್ಪ ಶಿವಲಿಂಗಪ್ಪ ಮುರಗಾನೂರ್, ವಿಜಯಕುಮಾರ್ ಬಲವಂತರಾಯ ನೇಗಲಗಿ, ಸೂರ್ಯಕಾಂತ ಮುರಗಾನೂರ್, ಸುಭಾಷ್ ಪಾಟೀಲ್ ಇವರು ವಿಷ ಸೇವಿಸಿದ್ದಾರೆ. ಅದಕ್ಕೆ ಸರಿಯಾದ ರೀತಿಯಲ್ಲಿ treatment ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ "you give the direction". ನಾಳೆ ಸಾಯಂಕಾಲ 4.30 ಗಂಟೆಯ ಸಭೆಗೆ ನಾವು ಹಾಜರಾಗುತ್ತೇವೆ. ರೈತ ಮುಖಂಡರಿಗೂ ಕೂಡ ಆಹ್ವಾನಿಸಿ. ಒಬ್ಬಿಬ್ಬ ಜಿಲ್ಲಾಧಿಕಾರಿಗಳನ್ನು ಕರೆಸಿ ಮಾತನಾಡಿದರೆ ಎಲ್ಲ ಕಡೆಗೆ ಸರಿಯಾದ ಸಮಾಲೋಚನೆಯಾಗುತ್ತದೆ. Meanwhile, you have to give a direction to the Deputy

Commissioner. Health Department ಅವರಿಗೆ ಹೇಳಿ ಇವರನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :– ವಿಷಯ ಗೊತ್ತಾದ ತಕ್ಷಣ ಈಗಾಗಲೇ ನಾನು ನನ್ನ ಛೇಂಬರ್‌ನಲ್ಲಿಯೇ ಮಾತನಾಡಿದ್ದೇನೆ. ರೈತರಿಗೆ ಶುಶ್ರೂಷೆ ಕೊಡತಕ್ಕಂಥಾದ್ದೇನಿದೆ ಮತ್ತು ಸರ್ಕಾರದಿಂದ ತಕ್ಷಣ ಏನಾದರೂ ಅವರಿಗೆ ಆರೋಗ್ಯದ ಖರ್ಚಿಗೆ ಪರಿಹಾರ ಕೊಡತಕ್ಕಂಥಾದ್ದಕ್ಕೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ.

5. ಶಾಸನ ರಚನೆ

ವಿಧೇಯಕಗಳ ಮಂಡನೆ

ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2007

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ;

"2007ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ಪಂಚಾಯತ್‌ರಾಜ್ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :– ವಿಧೇಯಕವನ್ನು ಮಂಡಿಸಲಾಗಿದೆ.

ಅಧ್ಯಕ್ಷರು :– ಈಗ ಸಮಯ 1.45 ಗಂಟೆಯಾಗಿದೆ. ಭೂ ಕಂದಾಯ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.